**3** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ**.,**ರವರ ನ್ಯಾಯಾಲಯ**,** ಕಡೂರು

<u>ಸಿ.ಸಿ.ನಂ**. 2254/2022.**</u>

ದಿನಾಂಕಃ **07.08.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**.**

| | | |
|---|---|---|
| ಸಾಕ್ಷಿಯ ಹೆಸರು | ಬಸವರಾಜಪ್ಪ | ಚಾಸಾ-12, ಪ್ರಾಸ-7 |
| ತಂದೆಯ ಹೆಸರು | ಹನುಮಂತಪ್ಪ | |
| ವಯಸ್ಸು | 58 ವರ್ಷ | |
| ಉದ್ಯೋಗ | ಪಿ ಎಸ್ ಐ | |
| ವಾಸ | ಯಗಟಿ ಪೊಲೀಸ್ ಠಾಣೆ | |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

2020 ರಿಂದ 2023 ರ ವರೆಗೂ ಬೀರೂರು ಪೊಲೀಸ್ ಠಾಣೆಯ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ27.07.2021 ರಂದು ಈ ಕೇಸಿನ ಕಡತವನ್ನು ಚಾಸಾ 11 ರವರಿಂದ ಪಡೆದುಕೊಂಡು ಪರಿಶೀಲನೆ ಮಾಡಿರುತ್ತೇನೆ. ನಂತರ ಅದೇ ದಿನ ಕೃತ್ಯ ನಡೆದ ಸ್ಥಳವಾದ ಕಡೂರು ಉಪ ನೊಂದಣಾಧಿಕಾರಿಯವರ ಕಛೇರಿಗೆ ಹೋಗಿ ಅಲ್ಲಿ ಇದ್ದ ಚಾಸಾ 2, 4 ರವರನ್ನು ಕರೆದು ಅವರಿಗೆ ಪ್ರಕರಣದ ವಿಚಾರವನ್ನು ತಿಳಿಸಿ ಪಂಚರಾಗಿ ಸಹಕರಿಸಲು ನಿಪಿ 6 ರಂತೆ ನೋಟೀಸು ನೀಡಿ ಕೋರಿರುತ್ತೇನೆ. ಸಾಕ್ಷಿಯು ನಿಪಿ 6 ರಲ್ಲಿ ತನ್ನ ಸಹಿ ಗುರುತಿಸಿದ್ದು ಸದರಿ ಸಹಿಯನ್ನು ನಿಪಿ6 ಸಿ ಎಂದು ಗುರುತಿಸಲಾಯಿತು. ನಂತರ ಅದೇ ಸ್ಥಳದಲ್ಲಿ ಚಾಸಾ 1 ರವರು ಸಹ ಹಾಜರು ಇದ್ದು ಅವರು ತೋರಿಸಿದ ಸ್ಥಳಾದಲ್ಲಿ ಚಾಸಾ 1, ಚಾಸಾ 2, 4 ರವರ ಸಮಕ್ಷಮ ಬೆಳಗ್ಗೆ 10.30 ರಿಂದ 11.30 ರ ವರೆಗೂ ನಿಪಿ 7 ರಂತೆ ಮಹಜರ್ ಕ್ರಮ ಜರುಗಿಸಿರುತ್ತೇನೆ ಹಾಗೂ ಆ ಕಾಲದಲ್ಲಿ ನಿಪಿ 8 ರಂತೆ ಪೋಟೋ ತೆಗೆದಿರುತ್ತೇನೆ. ಸಾಕ್ಷಿಯು ನಿಪಿ 7 ಮಹಜರ್ ಅನ್ನು ನೋಡಿ ಗುರುತಿಸಿದ್ದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ7 ಸಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ 8 ಪೋಟೋ ನೋಡಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ.

ದಿಃ27.01.2022 ರಂದು ಉಪ ನೊಂದಣಾಧಿಕಾರಿಯವರು ಕಡೂರು ಮತ್ತು ತರೀಕೆರೆ ರವರುಗಳಿಗೆ ನೋಟೀಸು ಜಾರಿ ಮಾಡಿ ವಿವಾದಿತ ಸ್ಥಳದ ದಾಖಲೆ ನೀಡುವಂತೆ ಕೋರಿರುತ್ತೇನೆ. ಸದರಿ ನೋಟೀಸ್ ಅನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ 12 ಎಂದು ಸಾಕ್ಷಿಯ ಸಹಿಯನ್ನು ನಿಪಿ12 ಎ ಎಂದು ಗುರುತಿಸಲಾಯಿತು.

ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆಗೆಂದು ಚಾಸಾ13 ರವರಿಗೆ ಹಸ್ತಾಂತರಿಸಿರುತ್ತೇನೆ.

This is a True Copy of the Court Records Online. Authenticated @ districts.ecourtsindia.com/cnr/KACM210031102022/truecopy/order-2.pdf

www.ecourtsindia.com

ಪಾಟೀಸವಾಲುಃ ಆರೋಪಿ ಪರ ಶ್ರೀ ಎಸ್ ಎನ್ ಎ ವಕೀಲರಿಂದ **:-**

ಚಾಸಾ1 ರವರಿಗೆ ಕನ್ನಡ ಭಾಷೆ ಬರುತ್ತಿರಲಿಲ್ಲ ಎಂದರೆ ಸರಿ. ಚಾಸಾ 2, 4 ರವರು ಕಡೂರಿನ ನಿವಾಸಿಗಳಲ್ಲ ಎಂದರೆ ಸರಿ. ಮಹಜರ್ ಕಾಲದಲ್ಲಿ ಹಲವಾರು ವ್ಯಕ್ತಿಗಳು ಸೇರಿದ್ದರು. ನಿಪಿ 8 ರ ಪೋಟೋವನ್ನು ಕಡೂರಿನ ಉಪ ನೋಂದಣಾಧಿಕಾರಿಯವರ ಕಛೇರಿಯ ಬಾಗಿಲ ಬಳಿ ತೆಗೆಯಲಾಗಿದೆ ಎಂದರೆ ಸರಿ. ನಿಪಿ 7 ರ ನಕಾಶೆಯನ್ನು ಕಂಪ್ಯೂಟರ್ ವಿಭಾಗದ ಬಳಿ ಮಾಡಲಾಗಿದೆ ಎಂದರೆ ಸರಿ. ದಿಃ27.07.2021 ರಂದು ಡಿ.ಸಿ.ರವರ ಆದೇಶದಂತೆ ಕೋವಿಡ್-19 ರ ಷರತ್ತುಗಳು ಚಾಲ್ತಿಯಲ್ಲಿ ಇತ್ತು ಎಂದರೆ ಸರಿ. ಸದರಿ ಅವಧಿಯಲ್ಲಿ ಮೆಡಿಕಲ್ ಮತ್ತು ಆಸ್ಪತ್ರೆಗಳನ್ನು ಹೊರತು ಪಡಿಸಿ ಬೇರೆ ಎಲ್ಲಾ ಕಛೇರಿಗಳ ಕಾರ್ಯನಿರ್ವಹಣೆಗೆ ನಿಬರ್ಂಧವಿತ್ತು ಎಂದರೆ ಸರಿಯಲ್ಲ. ಆ ದಿನ ಉಪ ನೋಂದಣಾಧಿಕಾರಿಯವರ ಕಛೇರಿಯಲ್ಲಿ ಯಾರು ಇರಲಿಲ್ಲ ಎಂದರೆ ಸರಿಯಲ್ಲ. ನಾನು ಬೇರೆ ಯಾವುದೋ ದಿನ ಹೋಗಿ ಮಹಜರ್ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 7 ರ ನಕಾಶೆಯಲ್ಲಿ ಪಶ್ಚಿಮಕ್ಕೆ ಏನು ಏನು ಇದೆ ಎಂದು ತೋರಿಸಿರುವುದಿಲ್ಲ ಎಂದರೆ ಸರಿ. ಕಡೂರಿನ ಉಪ ನೊಂದಣಾಧಿಕಾರಿಯವರ ಕಛೇರಿಗೆ ಸಾಮಾನ್ಯವಾಗಿ ಸಾರ್ವಜನಿಕರು ಏನಾದರೂ ಕೆಲಸವಿದ್ದರೆ ಮಾತ್ರ ಬರುತ್ತಾರೆ ಎಂದರೆ ಸರಿ. ನನ್ನ ಮಹಜರಿನಲ್ಲಿ ಕೋವಿಡ್ - 19 ರ ನಿರ್ಬಂಧ ಇದ್ದ ವಿಚಾರ ಹಾಗೂ ಮೇಲಾಧಿಕಾರಿಯವರಿಂದ ಮಹಜರ್ ಮಾಡಲು ಅನುಮತಿ ಪಡೆದ ವಿಚಾರವನ್ನು ಬರೆದಿರುವುದಿಲ್ಲ.

ನಿಪಿ 7 ರ ಮಹಜರ್ ಅನ್ನು ಠಾಣೆಯಲ್ಲಿ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ 8 ರ ಪೋಟೋವನ್ನು ಬೇರೆ ಯಾವುದೋ ದಿನ ತೆಗೆಯಲಾಗಿದೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-
C/c 3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.

www.ecourtsindia.com

This is a True Copy of the Court Records Online. Authenticated @ districts.ecourtsindia.com/cnr/KACM210031102022/truecopy/order-2.pdf